Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 49/2026

ಸಿ ಡಬ್ಲ್ಯೂ- 04
ಪಿ ಡಬ್ಲ್ಯೂ- 02

| | |
|---|---|
| ಸಾಕ್ಷಿದಾರರ ಹೆಸರು | ಃ- ಬಸನಗೌಡ |
| ತಂದೆಯ ಹೆಸರು | ಃ- ಶಂಕರಗೌಡ |
| ವಯಸ್ಸು | ಃ- 21 ವರ್ಷ |
| ಉದ್ಯೋಗ | ಃ- ಚಾಲಕ |
| ವಾಸಸ್ಥಳ | ಃ- ದೇವರಭೂಪೂರ |

**ದಿ.10-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.***

ಮೃತ ತಿಮ್ಮನಗೌಡ ನನ್ನ ಚಿಕ್ಕಪ್ಪ. ಚಾ.ಸಾ-1, 5 ರಿಂದ 7 ರವರ ಪರಿಚಯ ಇದೆ. 1ನೇ ಆರೋಪಿ ನನ್ನ ತಂದೆ. 2ನೇ ಆರೋಪಿ ನಮ್ಮೂರಿನವರು ಪರಿಚಯ ಇದೆ.

ಸುಮಾರು 9 ತಿಂಗಳ ಹಿಂದೆ ಚಾ.ಸಾ-1, ನಾನು ಮತ್ತು 1ನೇ ಆರೋಪಿ ಹಾಗೂ ಮೃತ ತಿಮ್ಮನಗೌಡ ಸೇರಿಕೊಂಡು ಕಾರ್ ನಂ.ಕೆಎ-01 ಎಮ್.ಜಿ-4619 ರಲ್ಲಿ ಮುಂಡರಗೇರಾ ದೊಡ್ಡಿಯಲ್ಲಿರುವ ಎಂಗೇಜಮೆಂಟಿಗೆ ಹೋಗಿ ವಾಪಸ್ ಅಮರೇಶ್ವರ ಕ್ರಾಸ್ ಹತ್ತಿರ ಬರುವಾಗ ಅಪಘಾತವಾಗಿರುತ್ತದೆ. ಅದು ಹೇಗಾಯಿತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಯಾವುದೇಹೇಳಿಕೆ ನೀಡಿಲ್ಲ.

2. ನಾನು ಪೋಲಿಸರಿಗೆ ಯಾವುದೇ ಸ್ಥಳ ತೋರಿಸಿಲ್ಲ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಾಹನಗಳನ್ನು ಜಪ್ತಿ ಪಡಿಸಿಕೊಂಡಿಲ್ಲ. ಪಂಚನಾಮೆಯನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು, ಪೋಟೋವನ್ನು ನಿ.ಪಿ-3 ಎಂದು, ವಾಹನ ಜಪ್ತಿ ಪಂಚನಾಮೆಯನ್ನು ನಿ.ಪಿ-4 ಎಂದು, ಆಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಪೋಟೊಗಳನ್ನು ನಿ.ಪಿ-5 ಮತ್ತು 6 ಎಂದು ಗುರುತಿಸಲಾಯಿತು.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ.**

ದಿನಾಂಕ 05-06-2025 ರಂದು ಸಂಜೆ 4-10 ಕ್ಕೆ ಚಾ.ಸಾ-1 ಮತ್ತು 1ನೇ ಆರೋಪಿ ಹಾಗೂ ಮೃತ ತಿಮ್ಮನಗೌಡ ಸೇರಿಕೊಂಡು ಕಾರ್ ನಂ.ಕೆಎ-01 ಎಮ್.ಜಿ-4619 ರಲ್ಲಿ ಮುಂಡರಗೇರಾ ದೊಡ್ಡಿಯಲ್ಲಿರುವ ಎಂಗೇಜಮೆಂಟಿಗೆ ಹೋಗಿ ವಾಪಸ್ ಅಮರೇಶ್ವರ ಕ್ರಾಸ್ ಹತ್ತಿರ ಬರುವಾಗ 1ನೇ ಆರೋಪಿತನು ಅತೀವೇಗ ಮತ್ತು ನಿರ್ಲಕ್ಷತನದಿಂದ ನಡೆಸಿಕೊಂಡು ಬಂದು ಅಮರೇಶ್ವರ ಕ್ರಾಸ್ ದಾಟಿ ದೇವರಭೂಪೂರ ಗ್ರಾಮದ ಆದನಗೌಡ ಹೊಲದ ಹತ್ತಿರ ನಿಯಂತ್ರಣ ಮಾಡದೆ ಅಲಕ್ಷತನದಿಂದ ನಡೆಸಿಕೊಂಡು ಬಂದು ಕಾರನ್ನು ಮರಕ್ಕೆ ಡಿಕ್ಕಿ ಪಡಿಸಿ ಪಲ್ಟಿಯಾಗಿ ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಕಾರಿನ ಹಿಂದಿನ ಕುಳಿತ ಚಾ.ಸಾ-1 ರವರ ಬಲಕಡೆ ಕಿವಿಯ ಹತ್ತಿರ ಹರಿದಗಾಯ, ಎದೆಗೆ ಒಳಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಸದರಿ ವಿಷಯವು ದಾರಿಹೋಕರಿಂದ ಗೊತ್ತಾಯಿತು ಎಂದರೆ ಸರಿಯಲ್ಲ. 1ನೇ ಆರೋಪಿಗೂ ಸಹ ಒಳಪೆಟ್ಟಾಗಿತ್ತು ಎಂದರೆ ಸರಿಯಲ್ಲ. ತಿಮ್ಮನಗೌಡನಿಗೆ ನೋಡಲಾಗಿ ಆತನ ಬಲ ಮಲಕಿಗೆ ತಲೆಗೆ ಭಾರಿ ರಕ್ತಗಾಯ ಸ್ಥಳದಲ್ಲೆ ಮೃತಪಟ್ಟಿರುತ್ತಾನೆ. ನಂತರ ಅಲ್ಲಿದ್ದ ಜನರು ಅವರನ್ನು ಕಾರಿನಿಂದ ಹೊರಗೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸೇರಿದ ಜನರು ಅಂಬುಲೆನ್ಸ್ ನಲ್ಲಿ ಲಿಂಗಸುಗುರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತನ 1ನೇ ಆರೋಪಿತನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ದಿನ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ.ಪಿ-7 ಎಂದು ಗುರುತಿಸಲಾಯಿತು.

2. ದಿನಾಂಕ 06-06-2025 ರಂದು ನಾನು ತೋರಿಸಿದ ಮೇರೆಗೆ ಮದ್ಯಾಹ್ನ 12-30 ರಿಂದ 1-30 ವರೆಗೆ ಅಪಘಾತವಾದ ಸ್ಥಳದಲ್ಲಿ ಚಾ.ಸಾ-6 ಮತ್ತು 7 ರವರ ಸಮಕ್ಷಮ ನಿ.ಪಿ-2 ರಂತೆ ಪಂಚನಾಮೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಮದ್ಯಾಹ್ನ 2-15 ರಿಂದ 3-20 ವರೆಗೆ ಲಿಂಗಸುಗೂರು ಪೋಲಿಸ್ ಠಾಣೆಯ ಆವರಣದಲ್ಲಿ ಚಾ.ಸಾ-6 ಮತ್ತು 7 ರವರ ಸಮಕ್ಷಮ ನಿ.ಪಿ-4 ರಂತೆ ಜಪ್ತಿ ಪಂಚನಾಮೆ ಮಾಡಿ ಕೆಎ-01, ಎಮ್.ಜಿ-4619 ನ್ನು ಜಪ್ತಿಪಡಿಸಿಕೊಂಡು ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-2 ರಿಂದ 7 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಯನ್ನು ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್.ಎಸ್.ಎಸ್  ವಕೀಲರಿಂದ : -**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..

ಲಿಂಗಸಗೂರು.